1. ಪ್ರಕಟಣೆ

ಅಧ್ಯಕ್ಷರು: 14ನೇ ವಿಧಾನಸಭಾ ಸದಸ್ಯರುಗಳ ಸಂಕ್ಷಿಪ್ತ ವ್ಯಕ್ತಿ ಪರಿಚಯ ಎಂಬ ಕಿರುಹೊತ್ತಿಗೆಯನ್ನು ಸಂಶೋಧನಾ ಮತ್ತು ಉಲ್ಲೇಖನಾ ಶಾಖೆಯ ಹೊರತರುತ್ತಿದ್ದು, ಸದರಿ ಕಿರುಹೊತ್ತಿಗೆಯಲ್ಲಿ ಮಾನ್ಯ ಸದಸ್ಯರ ಭಾವ ಚಿತ್ರಗಳನ್ನು ಅಳವಡಿಸಬೇಕಾಗಿರುತ್ತದೆ.

ವಿಧಾನ ಸಭೆಯ ಮೊಗಸಾಲೆಯಲ್ಲಿ ಸದಸ್ಯರ ಭಾವಚಿತ್ರಗಳನ್ನು ತೆಗೆಯಲು ವಾರ್ತಾ ಮತ್ತು ಪ್ರಚಾರ ಇಲಾಖೆಯ ವತಿಯಿಂದ ವ್ಯವಸ್ಥೆ ಮಾಡಲಾಗಿದ್ದು, ಎಲ್ಲಾ ಸದಸ್ಯರು ತಮ್ಮ ಭಾವಚಿತ್ರಗಳನ್ನು ತಪ್ಪದೇ ತೆಗೆಸಿಕೊಳ್ಳಬೇಕೆಂದು ತಿಳಿಸಲಾಗಿದೆ.

2. ಪ್ರಕಟನೆ

ಅಧ್ಯಕ್ಷರು: ಡಯಾಬಿಟಿಸ್ ರಿವರ್ಸಲ್ ಕ್ಲಿನಿಕ್, ಬೆಂಗಳೂರು ಇವರು ಮಧುಮೇಹ ಚಿಕಿತ್ಸೆಗೆ ಸಂಬಂಧಿಸಿದಂತೆ, ಇನ್ಸುಲಿನ್ ಬಳಸದೇ ಆಯುರ್ವೇದದ ಚಿಕಿತ್ಸಾ ವಿಧಾನದ ಮೂಲಕ ಸಹಜ ಸ್ಥಿತಿಗೆ ಬರುವಂತೆ ಪರಿಣಿತ ವೈದ್ಯರಿಂದ ವಿಧಾನಸಭೆಯ ಎಲ್ಲಾ ಸದಸ್ಯರುಗಳಿಗೂ ಅನುಕೂಲವಾದ ದೃಷ್ಟಿಯಿಂದ ಆಯುರ್ವೇದ ಚಿಕಿತ್ಸೆ ಮೂಲಕ ಗುಣ ಲಕ್ಷಣಗಳನ್ನು ತಿಳಿಸಲು ಮತ್ತು ಚಿಕಿತ್ಸೆಯನ್ನು ನೀಡಲು ದಿ: 7.7.14 ಮತ್ತು ದಿ: 9.7.14ರವರೆಗೆ ಸಮಯ ಬೆಳಿಗ್ಗೆ 6.00 ರಿಂದ ಸಾಯಂಕಾಲ 4.00ವರೆಗೆ ಶಾಸಕರ ಭವನ–2ರಲ್ಲಿರುವ ಸಮ್ಮೇಳನಾ ಸಭಾಂಗಣದಲ್ಲಿ ಶಿಬಿರವನ್ನು ನಡೆಸಲಿರುವರು. ಮಾನ್ಯ ವಿಧಾನಸಭೆಯ ಸದಸ್ಯರುಗಳು ಸದರಿ ಚಿಕಿತ್ಸೆ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಈ ಮೂಲಕ ಕೋರಲಾಗಿದೆ.